O.S. No- 142/2024

Pw-1

<u>ದಿನಾಂಕಃ 23-02-2026-ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರಿದ ಪಾಟಿ ಸವಾಲುಃ ಶ್ರೀ. ಸಿ.ಪಿ.ಎ. ಪ್ರತಿವಾದಿ ಪರ ವಕೀಲರಿಂದಃ** ಪರಶುರಾಮ ಭೀಮಪ್ಪ ತೇಲಿ ಹಾಗೂ ಗುರುಸಿದ್ದಪ್ಪ ಭೀಮಪ್ಪ ತೇಲಿ ನನ್ನ ತಮ್ಮಂದಿರು ಎಂದರೆ ಸರಿ. ಸರ್ವೇ ನಂ. 111/5 ಇದು ಕಡಕೋಳ ಗ್ರಾಮದ ಜಮೀನು ಎಂ.ಇ. ನಂ. 1312 ದಿನಾಂಕಃ 10.09.1963 ರಂದು ಗುರುಸಿದ್ದಪ್ಪ ನ್ಯಾಮಗೌಡ ಇವರ ಹೆಸರಿಗೆ ಬಂತು ಎಂದರೆ ಸರಿ. ಸದರಿ ಆಸ್ತಿಯನ್ನು ಪರಶುರಾಮ ಭೀಮಪ್ಪ ತೇಲಿ ಹಾಗೂ ಗುರುಸಿದ್ದಪ್ಪ ಭೀಮಪ್ಪ ತೇಲಿ ಇವರಿಗೆ ರುಕ್ಕವ್ವ ಗುರುಸಿದ್ದಪ್ಪ ನ್ಯಾಮಗೌಡ ಹಾಗೂ 1 ನೇ ಪ್ರತಿವಾದಿ ಕಸ್ತೂರಿ ಭೀಮಪ್ಪ ತೇಲಿ ಇಬ್ಬರೂ ಸೇರಿ ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲದೆ ಮಾಡಿರುತ್ತಾರೆ. ನಾನು ವಾದಪತ್ರದಲ್ಲಿ ಆಗಲೀ, ನನ್ನ ಮುಖ್ಯ ಸಾಕ್ಷ್ಯಪ್ರಮಾಣ ಪತ್ರದಲ್ಲಿ ನನ್ನ ತಾಯಿಗೆ ಹುಷಾರು ಇಲ್ಲ ಅಂತಾ ಬರೆಸಿಲ್ಲ. ನನ್ನ, ಹಾಗೂ ನನ್ನ ತಮ್ಮಂದಿರು ಹಾಗೂ 1 ನೇ ಪ್ರತಿವಾದಿ ನಡುವೆ ಮುಧೋಳ ಗ್ರಾಮದಲ್ಲಿರುವ ಆಸ್ತಿಗಳ ನಡುವೆ ದಿನಾಂಕಃ 23.02.2017 ರಂದು ಪಾಲುವಾಟ್ನಿ ಆಗಿದೆ ಎಂದರೆ ಸರಿಯಲ್ಲ. ಈ ಪಾಲುವಾಟ್ನಿಯಲ್ಲಿ ನಾನು ರೂ.400000/- ಹಣ ಪಡೆದು ಆಸ್ತಿ ಹಕ್ಕನ್ನು ಬಿಟ್ಟುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲುವಾಟ್ನಿ ನೋಂದಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ವಾಟ್ನಿ ಪತ್ರದಲ್ಲಿಯ ತಮ್ಮ ಸಹಿಯನ್ನು ನೋಡಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ.

ವಾಟ್ನಿಪತ್ರದಲ್ಲಿ ನನ್ನ ಸಹಿಯನ್ನು ಪೆನ್ಷನ್ ದಾಖಲೆ ತಯಾರಿಸಲು ಸುಳ್ಳು ಹೇಳಿ ಪಡೆದಿದ್ದಾರೆ ಎಂಬುದನ್ನು ವಾದಪತ್ರದಲ್ಲಿ ಬರೆಸಿದ್ದೇನೆ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯೊಂದಿಗೆ ನನ್ನ ಮಗಳು ವಿಚ್ಛೇದನ ಪಡೆದಿದ್ದರಿಂದ ಅವರ ಮೇಲಿನ ದ್ವೇಷದಿಂದ ಈ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿ ನಂ. 111/5 ಇದು ನನ್ನ ತಾಯಿಯ ತವರು ಮನೆ ಆಸ್ತಿ ಇದ್ದು ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲಿಗೆ ಕಲಾವಕಾಶ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.